**ಓ ಎಸ್  73/2022  ಡಿಡಬ್ಲ್ಯೂ.4**

**ಸಾಕ್ಷಿಯನ್ನು ದಿಃ 08.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ  ಎಂ ಎಸ್ ಪಿ  ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ.  ಈಗ ಟ್ರಾಕ್ಟರ್ ಚಾಲಕನಿಗೆ ದಿನ ಒಂದಕ್ಕೆ ರೂ.300/- ಆದಾಯ ಬರುತ್ತದೆ. ಟಿಪ್ಪರ್ ಲಾರಿ ಚಾಲಕನಿಗೆ ದಿನ ಒಂದಕ್ಕೆ ಸುಮಾರು ರೂ.500/- ಬರಬಹುದು. ಟಿಪ್ಪರ್ ಚಾಲಕ ಅಥವಾ ಲಾರಿ ಚಾಲಕ ಯಾರೇ ಆಗಲಿ ಅವರಿಗೆ ಮಾಲೀಕರೇ ಊಟ ಮತ್ತು ತಿಂಡಿ ನೀಡುತ್ತಾರೆ. ಆ ಕಾರಣದಿಂದ ಅವರಿಗೆ ನೀಡುವ ಸಂಬಳ ಪೂರ್ತಿ ಆ ಚಾಲಕರಿಗೆ ಉಳಿಯುತ್ತದೆ. ಈ ಪ್ರಕರಣದಲ್ಲಿ ಶ್ರೀನಿವಾಸರವರು ಟ್ರಾಕ್ಟರ್ ಚಾಲಕರಾಗಿ ಮತ್ತು ಪ್ರಕಾಶರವರು ಲಾರಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಟಿಪ್ಪರ್ ಲಾರಿ ಅಥವಾ ಟ್ರಾಕ್ಟರ್ ಚಲಾಯಿಸಲು ವಾಹನ ಚಾಲನಾ ಪರವಾನಗಿ ಇರಬೇಕು ಎಂದರೆ ಸರಿ. ಶ್ರೀನಿವಾಸ ಮತ್ತು ಪ್ರಕಾಶರವರ ಬಳಿ ವಾಹನ ಚಾಲನಾ ಪರವಾನಗಿ ಇಲ್ಲದೆ ಇದ್ದರೂ ಸಹ ಅವರ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಂದೆ ತಾಯಿ ಹೆಸರು ತಿಮ್ಮೇಗೌಡ ಮತ್ತು ಲಕ್ಷ್ಮಮ್ಮ. ಅವರಿಗೆ 3 ಜನ ಮಕ್ಕಳು ಎಂದರೆ ಸರಿಯಲ್ಲ, ಅವರಿಗೆ 4 ಜನ ಮಕ್ಕಳಾಗಿದ್ದು ಒಬ್ಬರು ತೀರಿಕೊಂಡಿದ್ದಾರೆ. 4 ಜನ ಮಕ್ಕಳ ಪೈಕಿ ತಿಮ್ಮಮ್ಮ ಎಂಬುವವರು ತೀರಿಕೊಂಡಿದ್ದಾರೆ. ತಿಮ್ಮಮ್ಮರವರಿಗೆ ಮದುವೆಯಾಗಿತ್ತು, ಆದರೆ ಮಕ್ಕಳು ಆಗಿರಲಿಲ್ಲ. ವಾದಿ ಮತ್ತು 1 ಹಾಗೂ 6 ನೇ ಪ್ರತಿವಾದಿಗಳು ಮೃತ ತಿಮ್ಮೇಗೌಡ ಹಾಗೂ ಲಕ್ಷ್ಮಮ್ಮರವರ ಜೀವಿತ ವಾರಸುದಾರರು ಎಂದರೆ ಸರಿ.

ತಿಮ್ಮೇಗೌಡ ಮತ್ತು ಲಕ್ಷ್ಮಮ್ಮರವರಿಂದ ಬಂದಿರುವ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ಗೊತ್ತಿದೆ. ಚಿನಕುರುಳಿ  ಹೋಬಳಿಯ ಗುಮ್ಮನಹಳ್ಳಿ

ಗ್ರಾಮದ ಸರ್ವೆ ನಂ. 512/2 ರಲ್ಲಿ ವಿಸ್ತೀರ್ಣ 1 ಎಕರೆ 0.12 ಗುಂಟೆ ಜಮೀನು ಟಿ ನಾಗೇಗೌಡರ ಸ್ವಯಾರ್ಜಿತ ಆಸ್ತಿ ಎಂದರೆ ಟಿ ನಾಗೇಗೌಡರು ಮತ್ತು ಅವರ ಮಕ್ಕಳು ಆ ಆಸ್ತಿಯನ್ನು ಸಂಪಾದಿಸಿದ್ದಾರೆ. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ವಾದಿಯು ಈ ದಾವೆಯಲ್ಲಿ ಕೇವಲ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳನ್ನು ಮಾತ್ರ ಸೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 549/2 ರ 0.28 ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಕಮಲೇಗೌಡರ ಜಮೀನು, ಪಶ್ಚಿಮಕ್ಕೆ: ರಾಮೇಗೌಡರ ಜಮೀನು, ಉತ್ತರಕ್ಕೆ: ಹೊಸೂರು ಗ್ರಾಮ, ದಕ್ಷಿಣಕ್ಕೆ: ಲಕ್ಷ್ಮಣರವರ ಜಮೀನು. ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳ ಸರ್ವೆ ನಂಬರು ನನಗೆ ಗೊತ್ತಿಲ್ಲ.

ತಿಮ್ಮೇಗೌಡ ಮತ್ತು ಲಕ್ಷ್ಮಮ್ಮರವರ ಜೀವಿತಾವಧಿಯಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ನಾಗೇಗೌಡರು ಒಬ್ಬರೇ ಮಗ ಆಗಿರುವ ಕಾರಣ ಪಿತ್ರಾರ್ಜಿತ ಆಸ್ತಿಗಳೆಲ್ಲವೂ ನಾಗೇಗೌಡರ ಬಳಿಯೇ ಉಳಿದುಕೊಂಡಿದ್ದವು. ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.

ದಾವಾ ಆಸ್ತಿಗಳೆಲ್ಲವೂ ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಸ್ವತ್ತುಗಳಲ್ಲಿ ವಾದಿಗೆ ಭಾಗಾಂಶ ನೀಡಿಲ್ಲ ಎಂದರೆ ನನ್ನ ದೊಡ್ಡಪ್ಪ ಹಾಗೂ ದೊಡ್ಡಮ್ಮ ತೀರಿಕೊಂಡಾಗ ವಾದಿಗೆ ಮತ್ತು ಉಳಿದ ಹೆಣ್ಣು ಮಕ್ಕಳಿಗೆ ಮದುವೆಯಾಗಿದ್ದ ಕಾರಣ ಮತ್ತು ಯಾವುದೇ ಪಾಲು ಕೇಳದೆ ಇದ್ದ ಕಾರಣ ಅವರುಗಳಿಗೆ ಭಾಗಾಂಶ ನೀಡಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಯಾವುದೇ ವ್ಯವಹಾರ ನನಗೆ ಗೊತ್ತಿಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಶ್ರೀನಿವಾಸ ಮತ್ತು ಪ್ರಕಾಶರವರು ನಮ್ಮ ತಂದೆ ಹಾಗೂ ಇತರರ ಬಳಿ ರೂ.40 ಲಕ್ಷ ಸಾಲ ಮಾಡಿ ಮನೆ

ನಿರ್ಮಿಸಿ ಆನಂತರ ಆ ಸಾಲವನ್ನು ತೀರಿಸಿದ್ದಾರೆ. ಆ ಸಾಲದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಸಾಲ ಮಾಡಿದ್ದಾರೆ ಮತ್ತು ತೀರಿಸಿದ್ದಾರೆ ಎಂದು ಕಟ್ಟುಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮಾಡಿಕೊಂಡಿರುವ ಯಾವುದೇ ವ್ಯವಹಾರದ ಬಗ್ಗೆ ವಾದಿಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಗಳು ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ ದಾವೆ ಹೂಡಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಆ ಕೇಸಿನಲ್ಲಿ ಈ ಕೇಸಿನ ವಾದಿಯನ್ನು ಸೇರಿಸಿರಲಿಲ್ಲ. ಈ ದಾವೆಯನ್ನು ಹೂಡುವ ಮೊದಲು ವಾದಿಯು ಪಂಚಾಯಿತಿದಾರರನ್ನು ಸೇರಿಸಿ ಪ್ರತಿವಾದಿಗಳನ್ನು ಭಾಗಾಂಶ ನೀಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದ ಅನುಸಾರ ಕಂದಾಯ ದಾಖಲೆಗಳು ಬದಲಾಗಿವೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನ್ಯಾಯಾಲಯದಲ್ಲಿ ಮಾಡಿಕೊಂಡಿರುವ ರಾಜೀ ತೀರ್ಮಾನವನ್ನು ಪ್ರತಿವಾದಿಗಳು ಯಾವುದೇ ಕಂದಾಯ ಅಧಿಕಾರಿಗಳಿಗೆ ನೀಡದೆ ಇರುವ ಕಾರಣ ಆ ಬಗ್ಗೆ ಕಂದಾಯ ದಾಖಲೆಗಳಲ್ಲಿ ನಮೂದು ಆಗಿಲ್ಲ ಮತ್ತು ಆ ಕಾರಣದಿಂದ ರಾಜೀ ತೀರ್ಮಾನದ ಬಗ್ಗೆ ವಾದಿಗೆ ಗೊತ್ತಿಲ್ಲ ಎಂದರೆ ಕಂದಾಯ ದಾಖಲೆಗಳಲ್ಲಿ ನಮೂದು ಆಗುವುದಕ್ಕೆ ಮೊದಲೇ ವಾದಿಯು ಈ ದಾವೆಯನ್ನು ಹೂಡಿದ ಕಾರಣ ನಮೂದು ಆಗಿಲ್ಲ. ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ನನಗೆ ಯಾವುದೇ ಸಮನ್ಸ್ ಬಂದಿಲ್ಲ. ಎಲ್ಲಾ ವಿಚಾರಗಳು ಗೊತ್ತಿರುವ ಕಾರಣ ನಾನೇ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ. ನನ್ನನ್ನು ಶ್ರೀನಿವಾಸ್ ರವರು ಕರೆದುಕೊಂಡು ಬಂದಿದ್ದಾರೆ ಗೊತ್ತಿರುವ ವಿಚಾರಗಳನ್ನು ನ್ಯಾಯಾಲಯದಲ್ಲಿ ಹೇಳುವಂತೆ ಕೇಳಿಕೊಂಡ ಕಾರಣ ನಾನು ನನಗೆ ಗೊತ್ತಿರುವ ವಿಚಾರಗಳನ್ನು ಹೇಳಲು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ. ಪ್ರತಿವಾದಿಗಳ ಚಿತಾವಣೆ ಮೇರೆಗೆ ವಾದಿಯ ಭಾಗಾಂಶವನ್ನು ತಪ್ಪಿಸುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**